# ಅಪಾರ್ಟ್‌ಮೆಂಟ್ ಕಥೆಗಳು



## ಶಮಿ, ಮರ ಮತ್ತು ಕಿಟಕಿ

ದಸರಾ ರಜೆಯ ಆ ಒಂದು ದಿನ, ಶಮಿಗೆ ಬಹಳವೇ ಬೋರಾಗುತ್ತಿತ್ತು. ಸ್ನೇಹಿತರೆಲ್ಲಾ ಬೇರೆ ಬೇರೆ ಊರುಗಳಿಗೆ ಹೋಗಿದ್ದರು. ಅಪಾರ್ಟ್‌ಮೆಂಟಿನಲ್ಲಿದ್ದ ಇಬ್ಬರೇ ಇಬ್ಬರು ಸ್ನೇಹಿತರು ಅಪ್ಪ ಅಮ್ಮನ ಜೊತೆ ಶಾಪಿಂಗ್ ಹೋಗಿದ್ದರು. ಮನೆಗೆ ಬರುತ್ತೇನೆಂದಿದ್ದ ಫ್ರೆಂಡೊಬ್ಬಳು, ಅಚಾನಕ್ ಆಗಿ ತನ್ನ ಮನೆ ನಾಯಿಯನ್ನು ವೈದ್ಯರ ಬಳಿ ಕರಕೊಂಡು ಹೋಗಬೇಕಾಗಿ ಬಂದಿರುವುದರಿಂದ, ಇಂದು ಬರಲಾಗುವುದಿಲ್ಲ ಎಂದು ತನ್ನಮ್ಮನ ಮೊಬೈಲಿಂದ ವಾಟ್ಸಾಪ್ ಮಾಡಿದ್ದಳು. ಹುಷಾರಿಲ್ಲದ ನಾಯಿಯ ಫೋಟೋವನ್ನೂ ಕಳಿಸಿದ್ದಳು. ಇದರಿಂದಾಗಿ ಶಮಿಗೆ ತಕ್ಕಮಟ್ಟಿಗೆ ಹೆಚ್ಚೇ ನಿರಾಸೆಯಾಯ್ತು. ಟೀವಿಯಲ್ಲಿ ಅವಳಿಗೆ ಈ ಕ್ಷಣಕ್ಕೆ ಇಷ್ಟವಾಗುವಂಥಾದ್ದು ಏನೂ ಇರಲಿಲ್ಲ. ಪುನಃ ಓರಿಯೋ ಬಿಸ್ಕೆಟ್ಟನ್ನೇ ತಿನ್ನುತ್ತಾ ಕೂರುವ ಮನಸಾಗಲಿಲ್ಲ. ಇನ್ನೇನು ಮಾಡುವುದೆಂದೇ ಅವಳಿಗೆ ಗೊತ್ತಾಗದೆ, ಬೋರಾಗಲು ಶುರುವಾಯಿತು. ಹೀಗೆ ಬೋರಾದಾಗಲೆಲ್ಲಾ, ಸಾಮಾನ್ಯವಾಗಿ ಬೆಡ್ ರೂಮಿನ ಕಿಟಕಿ ಬಳಿ ಕುಳಿತುಕೊಳ್ಳುತ್ತಿದ್ದಳು.

ಆ ಕಿಟಕಿಯೆಂದರೆ ಅವಳಿಗೆ ತುಂಬಾ ಇಷ್ಟ. ಯಾಕೆಂದರೆ, ಅಲ್ಲಿಂದ ಒಂದು ಮರ ಕಾಣುತ್ತದೆ. ಅದರಲ್ಲಿರುವ ಹಸಿರು ಎಲೆಗಳು ಒಮ್ಮೊಮ್ಮೆ ತನಗೆ ಹೈಫೈ ಮಾಡುವಂತೆ, ಹಳದಿ ಎಲೆಗಳು ಉಂಯೀಈಈ... ಎಂದು ಕೂಗುತ್ತಾ, ಉರುಳುತ್ತಾ, 'ಡೈವ್' ಹೊಡೆಯುವಂತೆ ಕಾಣುತ್ತವೆ. ಇನ್ನೂ ಸ್ವಲ್ಪ ಹೊತ್ತು ನೋಡುತ್ತಾ ಕುಳಿತರೆ ಎಲ್ಲಿಂದಲೋ ಒಂದು ಹಸು ಬರುತ್ತದೆ. ಮರದಿಂದ ಕೆಳಗೆ ಚಾಚಿರುವ ಎಲೆಗಳನ್ನು ತಿನ್ನತೊಡಗುತ್ತದೆ. ಅಷ್ಟೂ ಹೊತ್ತು ಕಾಣದ ಹಳದಿ ಬಣ್ಣದ ಚಿಟ್ಟೆಯೊಂದು ಆಗ ತಟಪಟನೆ ಚಿಟಪಟನೆ ಸುತ್ತುತ್ತಾ ಹಾರುತ್ತದೆ. ಒಂದು ಕಾಗೆಯೂ ಹಾರಿ ಬಂದು ಹಸುವಿನ ಬೆನ್ನ ಮೇಲೆ ಕೂರಲು ಪ್ರಯತ್ನಿಸುತ್ತದೆ. ಹಸು, ತನ್ನ ಬಾಲ ಬೀಸುತ್ತಾ ಅದನ್ನು ಓಡಿಸುತ್ತದೆ. ಆಗ ಶಮಿಗೆ ನಗು ಬರುತ್ತದೆ. ಇಷ್ಟೇ ಅಲ್ಲ, ಇನ್ನೂ ಸ್ವಲ್ಪ ಹೊತ್ತು ಹೀಗೇ ನೋಡುತ್ತಾ ಕುಳಿತರೆ, ಎಲ್ಲೋ ಮರದ ಮರೆಯಿಂದ 'ಕುಹೂ...' ಎಂಬ ದನಿಯೂ ಕೇಳುತ್ತದೆ. ಅದು ಕೋಗಿಲೆ ಎಂದೇನೋ ಅಮ್ಮ ಅವಳಿಗೆ ಹೇಳಿದ್ದಳು. ಆದರೆ ಅದನ್ನೆಂದೂ ಶಮಿ ಕಣ್ಣಿಂದ ಕಾಣಲೇ ಇಲ್ಲ. ಆದರದು 'ಕುಹೂ...' ಎನ್ನುವುದಂತೂ ಅಪ್ಪಟ ಸತ್ಯ. ಸತ್ಯ ಏಕೆಂದರೆ ಅದಕ್ಕೆ ಪುರಾವೆಯೂ ಇದೆ. ಈ 'ಕುಹೂ' ದನಿ ಕೇಳಿದೊಡನೆ ಶವಿಯೂ 'ಕುಹೂ' ಎನ್ನುತ್ತಾಳೆ. ಆಗ ಕೋಗಿಲೆಯೂ ಪುನಃ 'ಕುಹೂ' ಎನ್ನುತ್ತದೆ. ಶಮಿ ಜೋರಾಗಿ ಕೂಗಿದರೆ ಅದು ಇನ್ನಷ್ಟು ಮತ್ತಷ್ಟು ಜೋರಾಗಿ 'ಕುಹೂ... ಕುಹೂ...' ಎಂದು ಖುಷಿಯಿಂದ ಹಾಡುತ್ತದೆ.

ಬೋರಾದ ಆ ದಿನವೂ ಅಷ್ಟೇ. ಅಮ್ಮ ಕರೆಯುವವರೆಗೂ ಶಮಿ ಕಿಟಕಿಯಿಂದ ಹೊರಗೆ ನೋಡುತ್ತಲೇ ಇದ್ದಳು. ಮರುದಿನ ಶಮಿ ಹಾಗೂ ಅವಳ ಅಪ್ಪ ಅಮ್ಮ ಪ್ರವಾಸ ಹೋಗುವ ವಿಷಯವನ್ನು ಅಮ್ಮ ನೆನಪಿಸಿದಾಗ, ತಾನೇನೋ ಬಹುದೊಡ್ಡ ಜವಾಬ್ದಾರಿಯನ್ನು ಮರೆತೇ ಬಿಟ್ಟಂತೆ ಭಾಸವಾಗಿ ಕಿಟಕಿ ಬುಡದಿಂದೆದ್ದು ನಡೆದಳು. ಅವಳಿಗೆ ಅನಿಸಿದಂತೇ, ಶಮಿ ತನ್ನ ಜವಾಬ್ದಾರಿಗಳನ್ನು ನಿಜಕ್ಕೂ ಮರೆತಿದ್ದಳು. ಅವಳಿಗೆ ಬೇಕಾದ ವಸ್ತುಗಳು, ಆಟದ ಸಾಮಾಗ್ರಿಗಳನ್ನು ಎತ್ತಿಡುವಂತೆ, ಮಂಚದ ಮೇಲಿರಿಸಿದ ಬಟ್ಟೆಗಳಲ್ಲಿ ಅವಳಿಗೆ ಬೇಕಾದುವುಗಳನ್ನು ಆಯ್ಕೆ ಮಾಡಿಡುವಂತೆ ಅಮ್ಮ ಬೆಳಗ್ಗೆಯೇ ಹೇಳಿದ್ದಳು. ಆದರೆ ಶಮಿ ಅದನ್ನು ಮರೆತೇಬಿಟ್ಟಿದ್ದಳು. 'ಇಷ್ಟು ಹೊತ್ತೂ ಇದೇ ಮಂಚದ ಮೇಲೇ ಕುಳಿತಿದ್ದರೂ ಈ ಬಟ್ಟೆಗಳು ನಿನ್ನ ಕಣ್ಣಿಗೇ ಬೀಳಲಿಲ್ಲವಲ್ಲಾ? ಬಹಳ ಅದ್ಭುತ!' ಎಂದು ಅಮ್ಮ ತಲೆಗೊಂದು ಮೊಟಕಿ, ಕನಸು ಕಾಣುತ್ತಾ ಕೂರದೇ ಎಲ್ಲವನ್ನೂ ಬೇಗ ಮುಗಿಸುವಂತೆ ಎಚ್ಚರಿಸಿದಳು. ಆಟದ ಸಾಮಾನು, ಕಥೆ ಪುಸ್ತಕಗಳೂ ಅಷ್ಟೇ. ಅದೇನೇನು ಬೇಕೋ ಎಲ್ಲಾ ಈಗಲೇ ಹಾಕಿಕೋ. ಆಮೇಲೆ ಅಲ್ಲಿ ಹೋದ ಮೇಲೆ ಮೊಬೈಲ್‌ನಲ್ಲಿ ಆಟವಾಡುತ್ತಾ ಇರುವಂತಿಲ್ಲ. ಹಾಗಿದ್ದರೆ ಮಾತ್ರವೇ ಹೋಗುವುದೆಂದೂ ಅಮ್ಮ ಎಚ್ಚರಿಸಿದಳು.

ಪ್ರವಾಸ ಹೋಗುವ ವಿಷಯ ತಲೆಯೊಳಗೆ ಹೊಕ್ಕಾಯಿತು. ಬಟ್ಟೆಗಳನ್ನು ಒಂದೊಂದಾಗಿ ಬಿಡಿಸಿ ಮಡಸಿ ಮತ್ತೆ ಬಿಡಿಸುತ್ತಾ, ಮೈ ಮೇಲಿಟ್ಟು ಕನ್ನಡಿಯನ್ನೊಮ್ಮೆ ನೋಡುತ್ತಾ ಪ್ರವಾಸ ಹೋಗುವುದರ ಕುರಿತಾಗಿಯೇ ಕನಸು ಕಾಣತೊಡಗಿದಳು ಶಮಿ. ಇದ್ದಕ್ಕಿದ್ದಂತೆ